


# ಮಾಂತ್ರಿಕ

ಪದೇಪದೇ ಮರಳನ್ನು
ನನ್ನತ್ತ ದೂಡುತ್ತಲಿರುವ ಅಲೆಗಳಿಗೆ
ತುಟಿಗಳ ತೆರೆದು ಏನೋ ಹೇಳುವ ತವಕ
ಈಗಷ್ಟೇ ಬಂದು ಹೋದ ಅಲೆ
ಉಳಿಸಿಹೋಗಿದ್ದು ಅದೇನದು?

ಅರೆ! ಅಂದು ನಾ ಎಸೆದ ನನ್ನ ಹೃದಯ!
ನಿಜಕ್ಕೂ ಅದು ನನ್ನದೇನಾ...!
ದಿಟ್ಟಿಸಿ ನೋಡಿದಾಗ ಕಂಡವು ಎಸೆದಾಗ ಚುಚ್ಚಿದ ಎಲ್ಲ ಮುಳ್ಳುಗಳು
ಹಾಗೆ ಕಡಲೂ ಚುಚ್ಚಿದ ಒಂದು ಮೀನಿನ ಮುಳ್ಳು!
ಮರಳಿ ಮರಳಿನಲ್ಲಿ ಮತ್ತೆ ಅನಾಥವಾಗಿದೆ.

ಇರಲಿ... ಅದು ಹಾಗೇ... ಇರಲಿ
ಮತ್ತೊಂದು ಅಲೆ ಅದನ್ನು ಮರಳಿ ಸೆಳೆದೊಯ್ಯಲಿ
ಹಸುಗೂಸಿನಂತೆ ಹಟ ಹಿಡಿಯಿತು ಮನ



ಇನ್ನೇನು ಮರಳ ತಾಕೀತು ಮತ್ತೊಂದು ಅಲೆಯೆನ್ನುವಷ್ಟರಲ್ಲಿ
ಅತಿ ದೀನವಾಗಿ ನನ್ನನ್ನೇ ನೋಡುತ್ತಿರುವ ನನ್ನ ಹೃದಯವನ್ನು ಕಂಡಾಗ
ಹೃದಯಶೂನ್ಯ ಜಾಗವು ಒಂದಿಷ್ಟು ತೇವವಾಯಿತು
ಈ ಮಿಡಿತವೇ ಭರ್ಜರಿ ಅಷ್ಟೊಂದು ಮುಳ್ಳು ನಾಟಲು ಕಾರಣ

ಬೇಡ ಬೇಕಿಲ್ಲ
ಮತ್ತೆ ಆ ತೂತುಕೊರೆದ ಹೃದಯವನ್ನು ಅಪ್ಪಲಾರೆ
ಹೀಗೇ ಶೂನ್ಯವಾಗಿ ಸಾಗಲಿ ಯಾಂತ್ರಿಕ ಜೀವನ
ಕಾಯುತ್ತಾ ಸಾಂತ್ವನ ಮಾಂತ್ರಿಕನ ಬರವನ್ನ!!

● **ರೋಹಿಣಿ ಸತ್ಯ**

ಕಲೆ: ಡಿ.ಕೆ. ರಮೇಶ್